# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಡಾ॥ ವೈ. ಎ. ನಾರಾಯಣಸ್ವಾಮಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2806** |
| ಉತ್ತರಿಸಬೇಕಾದ ದಿನಾಂಕ | : | **29-03-2022** |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಉತ್ಪಾದಕರ ಸಂಘದ ವತಿಯಿಂದ ಪ್ರತಿನಿತ್ಯ ಶೇಖರಣೆ ಆಗುವ ಹಾಲಿನ ಪ್ರಮಾಣವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಕಾರ್ಯ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ವತಿಯಿಂದ 2021 ರ ಏಪ್ರಿಲ್‌ನಿಂದ 2022ರ ಫೆಬ್ರವರಿವರೆಗೆ ದಿನವಹಿ ಸರಾಸರಿ 8,11,915 ಕೆ.ಜಿ. ಪ್ರಮಾಣದಷ್ಟು ಹಾಲು ಶೇಖರಣೆಯಾಗಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ.ಸಂ. | ಕೋಲಾರ ಜಿಲ್ಲೆ ತಾಲ್ಲೂಕು | ಹಾಲು ಶೇಖರಣೆ ಕೆ.ಜಿ.ಗಳಲ್ಲಿ |
|---|---|---|
| 1 | ಕೋಲಾರ | 1,42,130 |
| 2 | ಮಾಲೂರು | 85,774 |
| 3 | ಬಂಗಾರಪೇಟೆ | 1,12,571 |
| 4 | ಮುಳಬಾಗಿಲು | 70,511 |
| 5 | ಶ್ರೀನಿವಾಸಪುರ | 47,418 |
| | **ಒಟ್ಟು** | **4,58,403** |
| **ಕ್ರ.ಸಂ.** | **ಚಿಕ್ಕಬಳ್ಳಾಪುರ ಜಿಲ್ಲೆ ತಾಲ್ಲೂಕು** | **ಹಾಲು ಶೇಖರಣೆ ಕೆ.ಜಿ.ಗಳಲ್ಲಿ** |
| 1 | ಚಿಕ್ಕಬಳ್ಳಾಪುರ | 70,154 |
| 2 | ಚಿಂತಾಮಣಿ | 92,629 |
| 3 | ಶಿಡ್ಲಘಟ್ಟ | 1,08,892 |
| 4 | ಗೌರಿಬಿದನೂರು | 51,598 |
| 5 | ಬಾಗೇಪಲ್ಲಿ | 19,405 |
| 6 | ಗುಡಿಬಂಡೆ | 10,833 |
| | **ಒಟ್ಟು** | **3,53,512** |
| | **ಎರಡು ಜಿಲ್ಲೆಗಳಿಂದ ಒಟ್ಟು** | **8,11,915** |

| | | |
|---|---|---|
| ಆ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಹಾಲು ಒಕ್ಕೂಟದಲ್ಲಿ ರೈತರಿಗೆ ಪ್ರತಿ ಲೀಟರಿಗೆ ನೀಡುತ್ತಿರುವ ದರ ಎಷ್ಟು; | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟದಲ್ಲಿ ರೈತರಿಂದ ಸ್ವೀಕರಿಸಲಾಗುತ್ತಿರುವ ಪ್ರತಿ ಲೀಟರ್ ಹಾಲಿಗೆ ಶೇ.4.1 ಜಿಡ್ಡಿನಾಂಶ ಮತ್ತು 8.50 ಜಿಡ್ಡೇತರ ಘನಾಂಶವನ್ನಾಧರಿಸಿ ಪ್ರಸ್ತುತ ಕನಿಷ್ಟ ದರ ರೂ.25.08ನ್ನು ಪಾವತಿಸಲಾಗುತ್ತಿದೆ. ಅಲ್ಲದೇ, ಪ್ರತೀ ಲೀಟರ್ ಗುಣಮಟ್ಟದ ಹಾಲಿಗೆ ರಾಜ್ಯ ಸರ್ಕಾರದ ಕ್ಷೀರಧಾರೆ ಯೋಜನೆಯಡಿಯಲ್ಲಿ ರೂ. 5/- ರಂತೆ ಪ್ರೋತ್ಸಾಹಧನವನ್ನು ಪಾವತಿಸಲಾಗುತ್ತಿದೆ. |
| ಇ) | ಈ ದರವು ರಾಜ್ಯದ ಬೇರೆ ಜಿಲ್ಲೆಗಳಿಗಿಂತ ಹಾಗೂ ಅಕ್ಕ-ಪಕ್ಕ ರಾಜ್ಯಗಳಿಗಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br><br>ಕೆಲವು ಹಾಲು ಒಕ್ಕೂಟಗಳಲ್ಲಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಹಾಲು ಒಕ್ಕೂಟವು ನಿಗದಿಪಡಿಸಿರುವ ಹಾಲಿನ ದರಕ್ಕಿಂತ ಕಡಿಮೆ ದರ ಹಾಗೂ ಕೆಲವು ಒಕ್ಕೂಟಗಳಲ್ಲಿ ಈ ಒಕ್ಕೂಟದ ದರಕ್ಕಿಂತ ಹೆಚ್ಚು ದರವನ್ನು ನಿಗದಿಪಡಿಸಿರುವುದು ಕಂಡು ಬಂದಿರುತ್ತದೆ. |
| ಈ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟದಿಂದ ಹಾಲಿನ ರೈತರಿಗೆ ನೀಡುವ ಪ್ರತಿ ಲೀಟರಿನ ದರ ಹೆಚ್ಚಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? | ಹಾಲು ಒಕ್ಕೂಟಗಳು ತಮ್ಮದೇ ಆದ ಆಡಳಿತ ಮಂಡಳಿಯನ್ನು ಹೊಂದಿದ್ದು, ಒಕ್ಕೂಟದ ಆರ್ಥಿಕ ಪರಿಸ್ಥಿತಿ, ಗ್ರಾಹಕರ ಹಾಗೂ ರೈತರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಕಾಲ-ಕಾಲಕ್ಕೆ ಪರಿಷ್ಕರಿಸಿ, ಹಾಲಿಗೆ ಸೂಕ್ತ ದರವನ್ನು ನೀಡುತ್ತಾ ಬಂದಿರುತ್ತವೆ. |

**ಸಂಖ್ಯೆ: ಸಿಒ 53 ಸಿಆರ್‌ಸಿ 2022**

(ಎಸ್.ಟಿ. ಸೋಮಶೇಖರ್)

**ಸಹಕಾರ ಸಚಿವರು**